# ವಾಹನಗಳ ಚಾಲಕರಿಗೆ ಸಲಹೆಗಳು

## ಅ) ದ್ವಿಚಕ್ರವಾಹನ ಚಾಲಕರಿಗೆ ಸಲಹೆಗಳು

ರಸ್ತೆಯಲ್ಲಿ ಅತಿ ಹೆಚ್ಚು ತೊಂದರೆಗೀಡಾಗುವವರು ನೀವೆಂಬುದನ್ನು ಗಮನಿಸಿ.

ದ್ವಿಚಕ್ರವಾಹನಗಳು ರಸ್ತೆಯಲ್ಲಿ ಕಡಿಮೆ ಸ್ಥಳವನ್ನು ಅಕ್ರಮಿಸಿಕೊಳ್ಳುತ್ತವೆ. ಕಡಿಮೆ ಇಂಧನವನ್ನು ಬಳಸುತ್ತವೆ. ರಸ್ತೆಗಳನ್ನು ಹದಗೆಡಿಸುವುದು ಅಪರೂಪ ಎಲ್ಲವೂ ಅನುಕೂಲಕರ/ಉತ್ತಮ ಅಂಶಗಳು ಆದರೆ ದುರದೃಷ್ಟವಶಾತ್ ಅನೇಕ ಬೇಜವಾಬ್ದಾರಿಯುತ ದ್ವಿಚಕ್ರ ವಾಹನ ಸವಾರರೆ ಈ ಕೆಳಗಿನ ನಿಮಯಗಳನ್ನು ಪಾಲಿಸಿದಲ್ಲಿ ನಿಮಗೆ ಮತ್ತು ಇತರರಿಗೆ ವಾಹನ ಚಾಲನಾೆ ಹಿತವಾಗಿರುತ್ತದೆ.
ಎಡಪಥಕ್ಕೆ ಅಂಟಿಕೊಂಡು ಸಾಗಿ ಮತ್ತು ಬಲಗಡೆಯ ಪಥವನ್ನು ವೇಗವಾಗಿ ಚಲಿಸುವ ವಾಹನಗಳಿಗೆ ಬಿಟ್ಟುಕೊಡಿ.
ಎಡಗಡೆಯಿಂದ ಮುನ್ನುಗ್ಗಬೇಡಿ.
ನಿಮ್ಮ ಸುರಕ್ಷತೆಗಾಗಿ ಹೆಲ್ಮೆಟ್ ಧರಿಸಿ.
ನಿಮ್ಮ ವಾಹನದ ಇಂಜಿನ್ನನ್ನು ಸುಸ್ಥಿತಿಯಲ್ಲಿಡಿ.
ಮಿತಿಮೀರಿದ ವೇಗದಿಂದ ವಾಹನವನ್ನು ಓಡಿಸಬೇಡಿ
ಅನಗತ್ಯವಾಗಿ ಶಬ್ದ ಮಾಡಬೇಡಿ.
ಪ್ರಾಣ ಅಮೂಲ್ಯವಾದದ್ದು ಎಂಬುದನ್ನು ತಿಳಿಯಿರಿ, ಯಾವುದೇ ಅವಘಡ ಸಂಭವಿಸಿದರೆ ಕಾರು ಮತ್ತು ಬಸ್ಸುಗಳ ಚಾಲಕರಿಗಿಂತ ನೀವೇ ಹೆಚ್ಚು ತೊಂದರೆಗೆ ಒಳಗಾಗುವುದು ಎಂಬುದು ನಿಮಗೆ ತಿಳಿದಿರಲಿ.

## ಬಿ) ಕಾರು ಚಾಲಕರಿಗೆ ಸಲಹೆಗಳು:

ಪಾದಚಾರಿಗಳು ಮತ್ತು ಸೈಕಲ್ ಸವಾರರ ಬಗ್ಗೆ ಗಮನಹರಿಸಿ, ಅದರಲ್ಲೂ ಮಳೆ ಮುಂತಾದ ಹವಾಮಾನ ಉತ್ತಮವಾಗಿಲ್ಲದಿರುವಾಗ.
ನೀವು ಕಾರಿನ ಮಾಲೀಕರಾಗುವ ವಿಶೇಷ ಹಕ್ಕು ಹಾಗೂ ಸಾಮರ್ಥ್ಯವುಳ್ಳ ಕೆಲವೇ ಮಂದಿಯಲ್ಲಿ ಒಬ್ಬರು. ಕಾರು ನಡೆಸಲು ಕೆಲವು ಸರಳ ನಿಯಮಗಳನ್ನು ಪಾಲಿಸುವುದರಿಂದ ವಾಹನ ಚಾಲನಾೆ ಆನಂದವೆನ್ನಿಸಬಹುದು.
ಜಂಕ್ಷನ್ ಬಳಿ ಬಲಗಡೆಯ ವಾಹನಗಳಿಗೆ ದಾರಿ ಬಿಡಿ. ಪ್ರತಿಯೊಬ್ಬರು ಅನುಕೂಲಕ್ಕಾಗಿ ಹಾತೊರೆಯುವಾಗ ಉಂಟಾಗುವ ಪರಿಣಾಮವೆಂದರೆ ತಪ್ಪಿಸಿಕೊಳ್ಳಲಾಗದ ವಾಹನ ಸಂದಣಿಯ ಗಜಿಬಿಜಿ.
ಅನವಶ್ಯವಗಿ ಶಬ್ದಮಾಡದಿರಿ. ಅಪಾಯದ ಮುನ್ಸೂಚನೆ ನೀಡಲು ಮಾತ್ರ ಅದನ್ನು ಬಳಸಿ, ಇಲ್ಲದಿದ್ದರೆ ಶಬ್ದ ಮಾಲಿನ್ಯದ ಮಟ್ಟ ಏರುತ್ತದೆ. ವಾಹನ ಚಾಲನೆ ಶ್ರಮದಾಯಕವಾಗುತ್ತದೆ.
ಇಷ್ಟಾಗಿಯೂ ಮುಂದೆ ಚಲಿಸಲು ಸಿಗುವ ಅವಕಾಶ ಅಷ್ಟುಕಷ್ಟೆ ಮಿತಿಮೀರಿದ ವೇಗ ಬೇಡ; ಅಥವಾ ಸಂಚಾರ ನಿಯಂತ್ರಣ ದೀಪಗಳನ್ನು ಜಿಗಿಯಬೇಡಿ, ನೀವು ಗಳಿಸುವ/ಉಳಿಸುವ ಸಮಯ ನಿಮ್ಮ ಜೀವ ಅಥವಾ ಅಂಗಾಂಗಗಳಿಗೆ ಒಡ್ಡುವ ಅಪಾಯಕ್ಕೆ ಸಾಟಿಯಿಲ್ಲ.
ನಿಮ್ಮ ವಾಹನವನ್ನು ಸುಸ್ಥಿತಿಯಲ್ಲಿಡಿ, ಹೊರಸೂಸುವ ಹೊಗೆ ಗಾಳಿಯ ಮಾಲಿನ್ಯಕ್ಕೆ ಕಾರಣವಾಗುತ್ತದೆ ಮತ್ತು ಆರೋಗ್ಯಕ್ಕೆ ಅಪಾಯಕಾರಿಯಾಗುತ್ತದೆ.
ನಿಮ್ಮಷ್ಟು ಅದೃಷ್ಟಶಾಲಿಗಳಲ್ಲದ ಪಾದಚಾರಿಗಳು, ಸೈಕಲ್ ಸವಾರರು, ಮತ್ತು ದ್ವಿಚಕ್ರ ವಾಹನದವರಿಗೆ ಸೌಜನ್ಯ ತೋರಿಸಿ ಮತ್ತು ಉದಾರವಂತರಾಗಿ

# ಒಳ್ಳೆಯ ಚಾಲನೆ ಬಗ್ಗೆ ಸಲಹೆಗಳು

## ಒಳ್ಳೆಯ ಚಾಲಕನ ನಡೆಗಳು:

ಅ) ಒಬ್ಬ ಉತ್ತಮ ಚಾಲಕ ಯಾವಾಗಲೂ ಪಾದಚಾರಿಗಳು, ಸೈಕಲ್ ಸವಾರರು ಮತ್ತು ಇತರೆ ಚಾಲಕರ ಬಗ್ಗೆ ಉದಾರನಾಗಿರುತ್ತಾನೆ. ಭಯಗೊಳ್ಳುವಂತಹ ವೇಗದಲ್ಲಿ ಅವರನ್ನು ಸಮೀಪಿಸಿ ಅವರು ಹೆದರುವಂತೆ ಮಾಡುವುದಿಲ್ಲ. ಹಾರನ್ ಮಾಡಿ ನಗರದಲ್ಲಿ ಹೆಚ್ಚಿನ ಮಟ್ಟದ ಶಬ್ದ ಮಾಲಿನ್ಯಕ್ಕೆ ತನ್ನ ಕೊಡುಗೆಯನ್ನು ಸೇರಿಸುವುದಿಲ್ಲ. ಮುಂದುಗಡೆಯ ಮುಖ್ಯ ದೀಪಗಳು ಪ್ರಖರವಾಗಿ ಉರಿಯುವಂತೆ ಮಾಡಿ ಎದುರುಗಡೆಯಿಂದ ಬರುವ ವಾಹನಗಳ ಚಾಲಕರ ಕಣ್ಣು ಕುರುಡಾಗುವಂತೆ ಮಾಡುವುದಿಲ್ಲ.

ಆ) ಸೌಜನ್ಯ ಶೀಲನಾಗಿರುತ್ತಾನೆ. ಬಲಭಾಗದಲ್ಲಿ ಬರುವ ವಾಹನಗಳಿಗೆ ದಾರಿ ಬಿಡುವುದು; ಪಾದಚಾರಿಗಳು ರಸ್ತೆ ದಾಟಲು ಅನುವು ಮಾಡಿಕೊಡಲು ವಾಹನವನ್ನು ನಿಧಾನಗೊಳಿಸುವುದು/ ಪದೇ ಪದೇ ಹಾರನ್ ಬಾರಿಸಿ ಅಸಮಾಧಾನವನ್ನು ತೋರಿಸದಿರುವುದು; ಇನ್ನೊಬ್ಬ ಚಾಲಕ ಸಂಕಷ್ಟದಲ್ಲಿದ್ದಾಗ ನೆರವಾಗುವುದು.

ಇ) ಸುರಕ್ಷಿತನಾಗಿರುತ್ತಾನೆ. ಮಿತಿಮೀರಿದ ವೇಗದಲ್ಲಿ ಹೋಗುವುದಿಲ್ಲ. ಅಜಾಗರೂಕತೆಯಿಂದ ಬೇರೊಂದು ವಾಹನವನ್ನು ಹಿಂದಕ್ಕೆ ಹಾಕಿ ಮುಂದೆ ಹೋಗುವುದಿಲ್ಲ. ತನ್ನ ವಾಹನವನ್ನು ಸುಸ್ಥಿತಿಯಲ್ಲಿಟ್ಟಿರುತ್ತಾನೆ. ಪಥ ಶಿಸ್ತನ್ನು ಪಾಲಿಸುತ್ತಾನೆ. ಸಂಚಾರ ಸಂಕೇತ ಮತ್ತು ವಾಹನ ನಿಲುಗಡೆಯ ನಿರ್ಬಂಧಗಳನ್ನು ಪಾಲಿಸುತ್ತಾನೆ. ಮಾಡಿ ಮತ್ತು ಮಾಡದಿರಿ

a)ಹಿಂದುಗಡೆಯಿಂದ ಇನ್ನೊಂದು ವಾಹನ ಸಮೀಪಿಸುತ್ತಿರುವಾಗ ಮುಂದುಗಡೆಯ ಮುಖ್ಯದೀಪಗಳನ್ನು ಡಿಪ್ ಮಾಡಿ.
b).ಮಳೆಯಲ್ಲಿ ಮಂಜು ಮುಸುಕಾಗಿದ್ದಾಗ ನಿಧಾನವಾಗಿ ಚಲಿಸಿ.
c.)ನಿಮ್ಮ ಬಲಭಾಗದಲ್ಲಿ ಬರುವ ವಾಹನಗಳಿಗೆ ದಾರಿ ಬಿಡಿ
d.)ವಾಹನ ಹೊರಸೂಸುವ ಹೊಗೆ ದಹ್ಯ ವಸ್ತುಗಳ ಪ್ರಮಾಣವನ್ನು ಕಾಲಕಾಲಕ್ಕೆ ಪರೀಕ್ಷಿಸಿಕೊಳ್ಳಿ.
e.)ವಾಹನಗಳ ಮುಕ್ತ ಎಡ ತಿರುವಿಗೆ ಜಾಗ ಬಿಡಿ. ಎಡ ತಿರುವಿಗೆ ಮುಕ್ತ ಅವಕಾಶವುಳ್ಳ ಜಂಕ್ಷನ್ಗಳಲ್ಲಿ ಎಡಭಾಗದ ಪಥವನ್ನು ಅಡ್ಡಗಟ್ಟಬೇಡಿ.
f.)ತಿರುವಿದ್ದಲ್ಲಿ ನಿಧಾನವಾಗಿ ಚಲಿಸಿ
g.)ನಿಮ್ಮ ವಾಹನವನ್ನು ಹಾರ ಹೂಗೊಂಚಲುಗಳಿಂದ ಸಿಂಗರಿಸಬೇಡಿ ಅವು ನಿಮ್ಮ ದೃಷ್ಟಿಯನ್ನು ಮಿತಿಗೊಳಿಸುತ್ತವೆ ಮ್ತು ಇತರ ಚಾಲಕರ ಗಮನವನ್ನು ಬೇರೆಡೆಗೆ ಸೆಳೆಯುತ್ತವೆ.
h.)ನಿಮ್ಮ ವಾಹನ ಚಾಲನಾ ಪರವಾನಗಿ ಮತ್ತು ನೊಂದಣಿಪತ್ರಗಳನ್ನು ಎಲ್ಲಾ ಸಮಯದಲ್ಲೂ ಜೊತೆಯಲ್ಲಿ ಒಯ್ಯಿರಿ.
i.)ಅಪಾಯ ತಪ್ಪಿಸುವಿಕೆಯ ಹೊರತಾಗಿ ಹಾರನ್ ಮಾಡದಿರಿ.
j.)ಉತ್ತಮವಾದ ದೀಪದ ಬೆಳಕುಳ್ಳ ರಸ್ತೆಯಲ್ಲಿ ಮುಂದುಗಡೆಯ ಮುಖ್ಯ ದೀಪಗಳನ್ನು ಬಳಸದಿರಿ.
k.)ನಗರದ ರಸ್ತೆಗಳಲ್ಲಿ ಮುಖ್ಯ ದೀಪಗಳನ್ನು ಪೂರ್ಣ ಮಟ್ಟದಲ್ಲಿ ಉರಿಸದಿರಿ.
l.)ಪಥಗಳ ಮದ್ಯೆ ನುಸುಳಬೇಡಿ
m).ಮದ್ಯಪಾನದ ಪ್ರಭಾವಕ್ಕೆ ಒಳಗಾಗಿ ವಾಹನವನ್ನು ಓಡಿಸದಿರಿ.
n.)ವಾಹನ ನಿಲುಗಡೆಯ ಸ್ಥಳವಲ್ಲದ ಕಡೆ ವಾಹನವನ್ನು ನಿಲ್ಲಿಸುವಿರಿ.
o.)ಅಂಚುಕಟ್ಟಿನಿಂದ 15 ಸೆಂ.ಮೀ. ಗಿಂತ ದೂರದಲ್ಲಿ ನಿಲುಗಡೆ ಮಾಡದಿರಿ.

## ಈ) ತಿರುವುಗಳಲ್ಲಿ ಚಲಿಸುವುದು

## ಎಡ ತಿರುವು

a).ತಿರುಗುವ ಪಥ ಮುಕ್ತವಾಗಿದೆ ಮತ್ತು ನಿಮ್ಮ ಹಿಂದೆ ಎಡಭಾಗದಲ್ಲಿ ಯಾರೂ ಬರುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ.
b.)ಕೈಯಿಂದ ಅಥವಾ ಸೂಚಕದಿಂದ ಸನ್ನೆ ಸಂಕೇತ ನೀಡಿ.
c.) ತಿರುಗುವುದಕ್ಕೆ ಮೊದಲು, ತಿರುಗುವಾಗ ಮತ್ತು ನಂತರ ಸಾಧ್ಯವಾದಷ್ಟು ರಸ್ತೆಯ ಎಡಭಾಗದಲ್ಲಿ ತಿರುಗುವಿಕೆ ಪೂರ್ಣಗೊಂಡ ನಂತರ ನಿಧಾನವಾಗಿ ಮತ್ತು ಅಡ್ಡಿ ಆತಂಕ ಉಂಟು ಮಾಡದೆ ಇತರ ವಾಹನಗಳೊಡನೆ ಸೇರಿಕೊಳ್ಳಿ.

## ಬಲ ತಿರುವು

a.)ನಿಮ್ಮ ಹಿಂದಿರುವ ವಾಹನಗಳು ಸುರಕ್ಷಿತ ದೂರದಲ್ಲಿರುವುದನ್ನು ಖಚಿತಪಡಿಸಿಕೊಳ್ಳಿ.
b.)ಬಲಸನ್ನೆ ಸಂಕೇತವನ್ನು ನೀಡಿ, ಕ್ರಮೇಣ ನಿಧಾನವಾಗಿ ಚಲಿಸಿ.
c.)ಬೇರೆ ವಾಹನಗಳು ನಿಮ್ಮ ಎಡಭಾಗದಿಂದ ಮುಂದೆ ಹೋಗಲು ಸಾಧ್ಯವಾದಷ್ಟು ಅವಕಾಶ ಮಾಡಿಕೊಡಿ ಮತ್ತು ರಸ್ತೆಯ ಮಧ್ಯದ ಅತಿ ಎಡಕ್ಕೆ ಬನ್ನಿ.
d.)ನಿಮ್ಮ ಮತ್ತು ಎದುರುಗಡೆಯಿಂದ ಬರುವ ವಾಹನಗಳ ನಡುವೆ ಸುರಕ್ಷಿತವಾದಷ್ಟು ಅಂತರ ಕಂಡುಕೊಂಡಲ್ಲಿ ತ್ವರಿತವಾಗಿ ಆದರೆ ಸುರಕ್ಷಿತವಾಗಿ ತಿರುಗಿಸಿ.